**ಓ:ಎಸ್:ನಂ.274/2019**

**ಪಿ.ಡಬ್ಲ್ಯೂ- 1**

***ದಿಃ 25-05-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್ ಸಿ ಎಸ್ ವಕೀಲರಿಂದ***

ನಾನು ಅವಿದ್ಯಾವಂತ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ದಾವ ಷೆಡ್ಯೂಲ್ ಸ್ವತ್ತಿನಲ್ಲಿ ಒಂದು ವಾಸದ ಮನೆ ಇದ್ದು, ಸದರಿ ಮನೆ ಮತ್ತು ಜಮೀನಿನಲ್ಲಿ ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿದ್ದಾರೆಂದರೆ ಸಾಕ್ಷಿಯು ವಾದಿಗಳಾದ ನಾವೇ ಸ್ವಾಧೀನಾನುಭವದಲ್ಲಿದ್ದೇವೆಂದು ಸಾಕ್ಷ್ಯ ನುಡಿಯುತ್ತಾರೆ. ದಾವ ಸ್ವತ್ತು ತಿಮ್ಮಣ್ಣ ಬಿನ್ ತಿಮ್ಮಣ್ಣನವರಿಗೆ ಸೇರಿದ ಸ್ವತ್ತು ಎಂದರೆ ಸರಿ. ಸದರಿ ತಿಮ್ಮಣ್ಣನವರು ಪ್ರತಿವಾದಿಯವರ ತಂದೆಯವರ ತಂದೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಹೆಸರು ತಿಮ್ಮಣ್ಣನ ಮತ್ತು ನಮ್ಮ ತಾತನ ಹೆಸರು ತಿಮ್ಮಣ್ಣ. ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ಸದರಿ ಸಮಯದ ದಾವ ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ದಾವ ಆಸ್ತಿಯ ಸರ್ವೆ ನಂ. ನಲ್ಲಿ *20* ಗುಂಟೆ ಜಮೀನು ತಿಮ್ಮಣ್ಣ ಬಿನ್ ತಿಮ್ಮಣ್ಣನವರ ಹೆಸರಿನಲ್ಲಿದೆ, ಅದೇ ರೀತಿ *4* ಎಕರೆ *4* ಗುಂಟೆ ಜಮೀನು ಹೆಚ್. ಇ. ಈಶ್ವರಪ್ಪ ಬಿನ್ ಈರಜ್ಜನವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. *2005* ನೇ ಸಾಲಿನಿಂದ ಇಲ್ಲಿಯತನಕ *1*ನೇ ಪ್ರತಿವಾದಿ ಹೆಸರಿನಲ್ಲಿ ದಾವ ಆಸ್ತಿಗೆ ಸಂಬಂಧಪಟ್ಟ ಖಾತೆಯು ಅವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ನಾವು ದಾವ ಸ್ವತ್ತಿಗೆ ಸಂಬಂಧಪಟ್ಟಂತೆ ತರೀಕೆರೆಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ರೆವಿನ್ಯೂ ಅಪೀಲನ್ನು ಸಲ್ಲಿಸಿದ್ದೇವೆ ಎಂದರೆ ಸರಿ. ಸದರಿ ಅಪೀಲು ಏನಾಗಿದೆ ಎಂದರೆ ನಮಗೆ ಆರೋಗ್ಯ ಸರಿ ಇರಲಿಲ್ಲ, ಆದ್ದರಿಂದ ಸದರಿ ಅಪೀಲು ಏನಾಗಿದೆ ಎಂದು ಇಲ್ಲಿಯತನಕ ತಿಳಿದುಕೊಂಡಿರುವುದಿಲ್ಲ. *1*ನೇ ಪ್ರತಿವಾದಿಯ ತಂದೆ ಮತ್ತು ತಾತನ ಮರಣ ಹೊಂದಿದ ನಂತರ ದಾವ ಸ್ವತ್ತಿನ ಖಾತೆಯು ಪವತಿ ವಾರಸು ಪ್ರಕಾರ *1*ನೇ ಪ್ರತಿವಾದಿಯ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

ಮರು ವಿಚಾರಣೆಃ ಇಲ್ಲ

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

ಓ. ಕೇ. ಸ. ಇ. ಎ. ಒ.

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**